ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 11–12–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **"National Lok Adalat":**<br><br>**Inaugurate:**<br><br>Justice V. Gopala Gowda,<br>Hon'ble Judge, Supreme Court of India, New Delhi.<br><br>**Presided by:**<br><br>Justice Subbro Kamal Mukherjee,<br>Acting Chief Justice,<br>High Court of Karnataka and Patron-in-Chief Karnataka State Level Services Authority, Bengaluru. | 12–12–2015<br><br>Saturday<br><br>at<br>10-00 AM | Patron-in-Chief Hall, High Court of Karnataka, Bengaluru |
| 2. | Felicitation Function to Distinguished Alumni and Prestigious Awardees: University of Agricultural Sciences | 12–12–2015<br><br>Saturday<br><br>at<br>2-00 PM | Prof. G.K. Veeresh Auditorium Convention Centre, University of Agricultural Science Hebbal, Bengaluru – 560 024 |

| | | | |
|---|---|---|---|
| | **Sri D.V. Sadananda Gowda,**<br>**Hon'ble Union Minister for Law and Justice, Govt. of India, New Dehli.**<br><br>**<u>Preside by</u> :**<br><br>**Dr. K. Narayana Gowda,**<br>**President,**<br>**Alumni Association, UAS (B)** | | |
| 3. | <u>"ಆಯುರ್ ಜ್ಯೋತಿ" ರಥಯಾತ್ರೆ</u> :<br><br><u>ಚಾಲನೆ:</u><br><br>ಯು.ಟಿ. ಖಾದರ್,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, | 14–12–2015<br>ಸೋಮವಾರ<br>ಬೆಳಿಗ್ಗೆ<br>9–00 ಗಂಟೆಗೆ | ಆಯುಷ್ ನಿರ್ದೇಶನಾಲಯದ ಆವರಣ, ಧನ್ವಂತರಿ ರಸ್ತೆ. ಆನಂದರಾವ್ ವೃತ್ತ, ಬೆಂಗಳೂರು |
| 4. | ಮಿನಿಮಮ್ ಗವರ್ನಮೆಂಟ್ – ಮ್ಯಾಕ್ಸಿಮಮ್ ಗವರ್ನೆನ್ಸ್' ಪ್ರಾದೇಶಿಕ ಸಮ್ಮೇಳನ :<br><br><u>ಉದ್ಘಾಟನೆ:</u><br><br>ಸಿದ್ದರಾಮಯ್ಯ,<br>ಮುಖ್ಯ ಮಂತ್ರಿಗಳು,<br>ಕರ್ನಾಟಕ ಸರ್ಕಾರ.<br><br><u>ಉಪಸ್ಥಿತಿ:</u><br><br>ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು | 14–12–2015<br>ಸೋಮವಾರ<br>ಬೆಳಿಗ್ಗೆ<br>9–30 ಗಂಟೆಗೆ | ಕೊಠಡಿ ಸಂಖ್ಯೆ 419,<br>ಸಮ್ಮೇಳನ ಸಭಾಂಗಣ,<br>ವಿಕಾಸಸೌಧ, ಬೆಂಗಳೂರು |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

# ಮಿನಿಮಮ್ ಗವರ್ನಮೆಂಟ್ – ಮ್ಯಾಕ್ಸಿಮಮ್ ಗವರ್ನೆನ್ಸ್ : ಪ್ರಾದೇಶಿಕ ಸಮ್ಮೇಳನ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

ಭಾರತ ಸರ್ಕಾರದ ಸಿಬ್ಬಂದಿ ತರಬೇತಿ ಮತ್ತು ಪಿಂಚಣಿ ಮಂತ್ರಾಲಯವು ರಾಜ್ಯದಲ್ಲಿ ಡಿಸೆಂಬರ್ 14 ಮತ್ತು 15 ರಂದು ವಿಕಾಸಸೌಧದ ಕೊಠಡಿ ಸಂಖ್ಯೆ 419, ಸಮ್ಮೇಳನ ಸಭಾಂಗಣದಲ್ಲಿ ಎರಡು ದಿನಗಳ 'ಮಿನಿಮಮ್ ಗವರ್ನಮೆಂಟ್ – ಮ್ಯಾಕ್ಸಿಮಮ್ ಗವರ್ನೆನ್ಸ್' ಪ್ರಾದೇಶಿಕ ಸಮ್ಮೇಳನವನ್ನು ಹಮ್ಮಿಕೊಂಡಿದೆ.

ಸಮ್ಮೇಳನದಲ್ಲಿ ಸಮರ್ಪಕ ಆಡಳಿತಕ್ಕಾಗಿ ಅಳವಡಿಸಿಕೊಳ್ಳಬೇಕಾದ ಕ್ರಮಗಳು, ಆಧಾರ್ ಸೇವೆಯಾಧರಿತ ಸಾರ್ವಜನಿಕ ಸೇವಾ ಯೋಜನೆಗಳು, ಮಾಹಿತಿ ತಂತ್ರಜ್ಞಾನ ಬಳಕೆ ಮೂಲಕ ಆರ್ಥಿಕ ಸೇರ್ಪಡೆ, ಸಾರ್ವಜನಿಕ ಸಾರಿಗೆಯಲ್ಲಿ ಮಾಹಿತಿ ತಂತ್ರಜ್ಞಾನ ಬಳಕೆ ಸೇರಿದಂತೆ ಇತ್ತೀಚೆಗೆ ವ್ಯಾಪಕ ಸುದ್ದಿ ಮಾಡುತ್ತಿರುವ ' ಸ್ಟಾರ್ಟ್ ಅಪ್' ಕುರಿತ ವಿಚಾರ ಸಂಕಿರಣ, ಪ್ರಾತ್ಯಕ್ಷಿಕೆಗಳು ಹಾಗೂ ನಗರದ 'ಸಿಸ್ಕೋ' ಕಂಪನಿಗೆ ಕ್ಷೇತ್ರ ಭೇಟಿಯನ್ನು ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ್ಮೇಳನವನ್ನು ಡಿಸೆಂಬರ್ 14 ರಂದು ಬೆಳಿಗ್ಗೆ 9–30 ಗಂಟೆಗೆ ಉದ್ಘಾಟಿಸಲಿದ್ದಾರೆ. ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಉಪಸ್ಥಿತರಿರುವರು. ವಿಧಾನಸಭಾ ಸದಸ್ಯರು, ಮುಖ್ಯ ಕಾರ್ಯದರ್ಶಿಗಳು, ಕೇಂದ್ರ ಸರ್ಕಾರದ ಹಾಗೂ ಇತರೆ ರಾಜ್ಯಗಳ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಪಲ್ಲವಿ:ಜಿಪಿಆರ್.

## Regional Conference on

## Minimum Government – Maximum Governance

Bangalore, December 11 (Karnataka Information)

The Ministry of Personnel, Public Grievances and Pensions has organized a two-day Regional Conference ‘Minimum Government-Maximum Governance’ on December 14th and 15th at Room No. 419, Conference Hall, Vikasa Soudha.

The conference having participation of delegates from across the country will be hosted by the State Government and inaugurated by Chief Minister Siddaramaiah on 14-12-2015 at the said venue at 9-30 a.m. Minister for Infrastructure Development, Information and Public Relations and Haj, Roshan Baig, MLAs, Chief Secretary to Government, various Central Government senior officials and other officials will be present.

The two day conference on GATI and Citizen Centric Delivery Services will focus on issues like ‘how to ease the Governance process and increase its efficiency by application of big data analytics’, Financial inclusion through use of IT and mobility.

It will also provide a platform for exploring ways of utilizing IT in public Transport. Various presentations and demonstrations will be conducted on these issues and a special panel discussion on the disruptions in public services delivery in transport will be held. The trending concept of Start-up also finds a prominent showcasing at the conference.

A field visit to CISCO Campus for a smart cities initiative demo has also been organised.

pallavi/km

## ಇಂಧನ ಸರಬರಾಜು ವ್ಯವಸ್ಥೆಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಸಚಿವಾಲಯದ ಶಾಸಕರ ಭವನದಲ್ಲಿ ಇರುವ 70 ವಾಹನಗಳಿಗೆ ಮಾಹೆಯಾನ ಸುಮಾರು ಹತ್ತು ಸಾವಿರ ಲೀಟರ್ ಇಂಧನ ಬಳಸಲಾಗುತ್ತಿದ್ದು, ಈ ವಾಹನಗಳಿಗೆ ಇಂಧನ ಸರಬರಾಜು ಮಾಡಲು ವಿಧಾನಸೌಧದಿಂದ ಎರಡರಿಂದ ಮೂರು ಕಿ.ಮೀ ಅಂತರವಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್ (IOC) ನ ವಿವಿಧ ಸಂಸ್ಥೆಗಳ ಪೆಟ್ರೋಲ್ ಬಂಕ್‌ಗಳಿಂದ ವಾಹನಗಳಿಗೆ ಪ್ರತಿನಿತ್ಯ ಇಂಧನ ಸರಬರಾಜು ಮಾಡಲು ಆಸಕ್ತರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತರು, ತಮ್ಮ ಅರ್ಜಿಯೊಂದಿಗೆ ಬಂಕ್‌ಗಳ ವಿವರ, ಸೌಲಭ್ಯ, ಆಸಕ್ತಿ ಇತ್ಯಾದಿ ವಿವರಗಳನ್ನು ಕ್ಷೇತ್ರಾಧಿಕಾರಿ, ಶಾಸಕರ ಭವನ, ವಿಧಾನಸಭೆಯ ಸಚಿವಾಲಯ, ಬೆಂಗಳೂರು – 560 233 ಇವರಿಗೆ ಒಂದು ತಿಂಗಳೊಳಗಾಗಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ದೂ. 080 – 22359570 ನ್ನು ಸಂಪರ್ಕಿಸಬಹುದಾಗಿದೆ ಎಂದು ಶಾಸಕರ ಭವನದ ಕ್ಷೇತ್ರಾಧಿಕಾರಿ ಕೆ. ವಿ. ಮುದ್ದಯ್ಯ ತಿಳಿಸಿದ್ದಾರೆ.

ಪಲ್ಲವಿ:ಜಿಪಿಆರ್.

# ಅಟಲ್‌ಜೀ ಜನಸ್ನೇಹಿ ಯೋಜನೆ : ಮೊದಲ ಹತ್ತು ಸ್ಥಾನ ಪಡೆದ ನಾಡ ಕಚೇರಿ

ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)

ನವೆಂಬರ್ ಮಾಹೆಯಲ್ಲಿ ಅಟಲ್‌ಜೀ ಜನಸ್ನೇಹಿ ಯೋಜನೆಯಡಿ ರಾಜ್ಯದ ಸಾರ್ವಜನಿಕರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಯನ್ನು ನಿಗದಿತ ಅವಧಿಯೊಳಗೆ ಪೂರೈಸಿದ ಮೊದಲನೆ ಹತ್ತು ಸ್ಥಾನ ಪಡೆದಿರುವ ನಾಡ ಕಚೇರಿಗಳ ಹಾಗೂ ಕೊನೆಯ ಹತ್ತು ಸ್ಥಾನಗಳನ್ನು ಪಡೆದಿರುವ ನಾಡ ಕಚೇರಿಗಳ ಪಟ್ಟಿಯನ್ನು ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯವು ಬಿಡುಗಡೆ ಮಾಡಿದೆ.

ಒಟ್ಟು 770 ನಾಡ ಕಛೇರಿಗಳ ಪೈಕಿ ರಾಮನಗರ ತಾಲ್ಲೂಕಿನ ಕೈಲಾಂಚ, ಬೆಳಗಾವಿಯ ರಾಯಬಾಗ, ರಾಮನಗರ ಮಾಗಡಿಯ ತಿಪ್ಪಸಂದ್ರ, ಬೆಳಗಾವಿಯ ಚಿಕ್ಕೋಡಿ, ಸದಲಗ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು, ತರೀಕೆರೆಯ ಅಜ್ಜಂಪುರ, ಉಡುಪಿಯ ಬ್ರಹ್ಮಾವರ, ಮಾಗಡಿಯ ಕಸಬ ಹಾಗೂ ಮಡಬಲೆ ನಾಡ ಕಚೇರಿಗಳು ಕ್ರಮವಾಗಿ ಮೊದಲ ಹತ್ತು ಸ್ಥಾನ ಪಡೆದಿದ್ದರೆ, ಚಾಮರಾಜನಗರ ಯಳಂದೂರು ತಾಲ್ಲುಕಿನ ಕಸಬ, ಚಿಕ್ಕಬಳ್ಳಾಪುರದ ನಂದಿ, ಕುಣಿಗಲ್‌ನ ಕೊಟಗೆರೆ, ಬಂಗಾರಪೇಟೆಯ ಕಸಬ, ದಾವಣಗೆರೆ ಹೊನ್ನಳಿ ತಾಲ್ಲೂಕಿನ ಕಸಬ, ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ, ಮಾಲೂರು ತಾಲ್ಲೂಕಿನ ಕಸಬ, ಹೊನ್ನಳಿ ತಾಲ್ಲೂಕಿನ

ಗೋವಿನಕೋವಿ, ಮಾಲೂರಿನ ಲಕ್ಕೂರು ಹಾಗೂ ತುರುವೇಕೆರೆಯ ದಬ್ಬೆಘಟ್ಟ ಕ್ರಮವಾಗಿ ಕಡೆಯ ಹತ್ತು ಸ್ಥಾನಗಳನ್ನು (761–770) ಪಡೆದಿವೆ.

ನಾಡಕಚೇರಿ ವೆಬ್‌ಸೈಟ್ **www.nadakacheri.karnataka.gov.in** ನ ವಿಲೇವಾರಿ ಸೂಚ್ಯಂಕದಲ್ಲಿ ಪಡೆಯಬಹುದಾಗಿದೆ.

ಪಲ್ಲವಿ:ಜಿಪಿಆರ್.

# ಹನುಮ ಜಯಂತಿ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾತೆ)**

ಬೆಂಗಳೂರು ನಗರ ಮಹಾಲಕ್ಷ್ಮೀಪುರಂದಲ್ಲಿರುವ ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾಲಯದಲ್ಲಿ ದಿನಾಂಕ: 23–12–2015 ರಿಂದ 27–12–2015 ರವರೆಗೆ ನಡೆಯುವ 40 ನೇ ವರ್ಷದ ಹನುಮ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಲವಿ/ಕೆಎಂ

# ವಿಧಾನ ಪರಿಷತ್ತಿನ ಸದಸ್ಯ ಡಾ: ಎಂ.ಆರ್. ಹುಲಿನಾಯ್ಕರ್ ರಾಜೀನಾಮೆ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾತೆ)**

ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಆರ್. ಹುಲಿನಾಯ್ಕರ್ ಅವರು ಡಿಸೆಂಬರ್ 8, 2015 ರಿಂದ ಜಾರಿಗೆ ಬರುವಂತೆ ತಮ್ಮ ವಿಧಾನ ಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದು, ಸದರಿಯವರ ರಾಜೀನಾಮೆಯನ್ನು ಸಭಾಪತಿಯವರು ಅಂಗೀಕರಿಸಿರುತ್ತಾರೆಂದು ಪ್ರಕಟಣೆ ತಿಳಿಸಿದೆ.

ಪಲ್ಲವಿ/ಕೆಎಂ

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು

ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:13-12-2015ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋ ೇಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ **"ಉದ್ಯಾನವನದಲ್ಲಿ ಉದಯರಾಗ"** ಎಂಬ ಶೀರ್ಷಿಕೆಯಡಿ ವಿದ್ವಾನ್ ಎಂ.ಎಸ್. ತ್ಯಾಗರಾಜು ಮತ್ತು ತಂಡದವರಿಂದ ಪಿಟೀಲು ವಾದನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ **"ಉದ್ಯಾನವನದಲ್ಲಿ ಸಂಧ್ಯಾರಾಗ"** ಎಂಬ ಶೀರ್ಷಿಕೆಯಡಿ ಶ್ರೀ ಶಾಂತರಾಜು ಮತ್ತು ತಂಡ, ಯಳಂದೂರು, ಚಾಮರಾಜನಗರ ಜಿಲ್ಲೆರವರಿಂದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3. ಬೆಳಿಗ್ಗೆ 6.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ-ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
7. ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರುರವರ ವತಿಯಿಂದ ನಗರ ಕೇಂದ್ರ ಗ್ರಂಥಾಲಯ ಮತ್ತು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣದಲ್ಲಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ.
8. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### I. ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

➢ **ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ವತಿಯಿಂದ ಶ್ರೀಮತಿ ಅಂಜನ ರಮೇಶ್‌ರವರಿಂದ ಭರತನಾಟ್ಯ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

➢ **ಬೆಳಿಗ್ಗೆ 08.00 ಗಂಟೆಯಿಂದ ಬೆಳಿಗ್ಗೆ 09.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಬಾಲಭವನ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ ಭ್ರಮರಿ ನೃತ್ಯ ತಂಡದವರಿಂದ ಕಾವ್ಯ ಬಾಗಿನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

➢ **ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಅಕ್ಷಯ ಫೌಂಡೇಷನ್ ರವರ ಸಹಯೋಗದೊಂದಿಗೆ ಡಾ. ಶಾಂತರಾಜು, ಸಹಪ್ರಾಧ್ಯಾಪಕರು, ಎಸ್.ಎಫ್.ಎಸ್ ಕಾಲೇಜು, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರುಇವರಿಂದ "ತೀ.ನಂ. ಶ್ರೀಕಂಠಯ್ಯನವರ ಕೊಡುಗೆಗಳು" ಬಗ್ಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

## II. ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

➢ **ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ರೇಷ್ಮೆ ಇಲಾಖೆಯ ವತಿಯಿಂದ ರೇಷ್ಮೆಗೂಡಿನಿಂದ ಮಾಡಿದ ವಿವಿಧ ವಿನ್ಯಾಸದ ಹಾರಗಳು ಅಲಂಕಾರಿಕ ಮತ್ತು ಇತರೆ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

➢ **ಬೆಳಿಗ್ಗೆ 6.00 ಗಂಟೆಯಿಂದ ಬೆಳಿಗ್ಗೆ 12.00 ಗಂಟೆಯವರೆಗೆ ವಿದ್ಯಾರಣ್ಯ ಸ್ವಯಂ ಸೇವಾ ಸಂಸ್ಥೆ, ಮಂಡೂರುರವರ ವತಿಯಿಂದ ಪೋಷಕರಹಿತ ಮಕ್ಕಳಿಂದ ವಿವಿಧ ನೃತ್ಯ ಕಾರ್ಯಕ್ರಮ ಮತ್ತು ಮಕ್ಕಳಿಂದ ಸ್ಥಳದಲ್ಲಿ ಚಿತ್ರ ಬಿಡಿಸುವುದು ಮತ್ತು ಚಿತ್ರಗಳಿಗೆ ಬಣ್ಣ ಹಚ್ಚುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

# ಚನ್ನೈ ಪ್ರವಾಹ ಸಂತ್ರಸ್ಥರಿಗೆ ನೆರವು

**ಬೆಂಗಳೂರು, ಡಿಸೆಂಬರ್ 11 (ಕರ್ನಾಟಕ ವಾರ್ತೆ)**

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷ ಜಿ. ಸಿ. ಚಂದ್ರಶೇಖರ್, ವ್ಯವಸ್ಥಾಪಕ ನಿರ್ದೇಶಕ ಪಿ. ಮಣಿವಣ್ಣನ್ ಎಲ್ಲಾ ಹಿರಿಯ ಅಧಿಕಾರಿಗಳು ಹಾಗೂ ನೌಕರರು ತಮ್ಮ ಒಂದು ದಿನದ ವೇತನವನ್ನು ಚೈನ್ನೈ ಪ್ರವಾಹ ಸಂತ್ರಸ್ಥರಿಗೆ ನೀಡಲು ತೀರ್ಮಾನಿಸಿ ಅದರಂತೆ 1450 ಸೀರೆಗಳು, ಲುಂಗಿ/ಪಂಚೆ/ಟವೆಲ್ – 1450, ಬೆಡ್ ಶೀಟ್ –1450, 1500 ಸ್ಟೀಲ್ ತಟ್ಟೆ, 250 ಸೊಳ್ಳೆಪರದೆಗಳು, 7000 ಬ್ರಿಸ್‌ಲೆರಿ ವಾಟರ್ ಬಾಟಲ್‌ಗಳನ್ನು ನಾಲ್ಕು ಟ್ರಕ್ಕುಗಳಲ್ಲಿ ತುಂಬಿ ಅಲ್ಲಿನ ಎನ್.ಜಿ.ಒ ಮೂಲಕ ವಿತರಿಸಲು ಇಂದು ರವಾನಿಸಿದೆ.

ಛಾಯಾಚಿತ್ರ ಲಗತ್ತಿಸಿದೆ)

ಪಲ್ಲವಿ/ಕೆಎಂ